ಶ್ರೀ ಎಸ್.ಎಂ. ಶೀರ್ನಾಳಿ ಚೆಂದ್ರಶೇಖರ್.—ಇದರಿಂದ ಸುಮಾರು ಆರೇಳು ಸಾವಿರ ಕುಟುಂಬ ಗಳಿಗೆ ತೊಂದರೆಯಾಗುತ್ತದೆ. ಇದು ಸಣ್ಣ ಯೋಜನೆಯೇನೂ ಅಲ್ಲ. ಆರೇಳು ಸಾವಿರ ಕಟುಂಬಗಳು ಈ ಯೋಜನೆಯಿಂದ ಜಮೀನನ್ನು ಕಳೆದುಕೊಳ್ಳುತ್ತೇವೆ. ಅವರಿಗೆ ಜಮೀನು ಕೊಡತಕ್ಕ ವ್ಯವಸ್ಥೆ ಏನೂ ಮಾಡಲ್ಲ. ಅವರಿಗೆ ಜಮೀನು ಕೊಡುವುದಕ್ಕೆ ಎಲ್ಲಿಯೂ ಕೂಡ ಜಮೀನು ರಿಸರ್ವೇಷನ್ ಮಾಡಿಲ್ಲ. ಕರ್ನಾಟಕದ ಯಾವ ಪ್ರದೇಶದಲ್ಲಿಯಾದರೂ ಅಪರ ಪುನರ್ ವಸತಿಗೆ ರಿಸರ್ವೇಷನ್ ಮಾಡಿದ್ದೆ ವೆಂದು ಹೇಳಿದ್ದರೆ ಅವರಿಗೆ ನೆಮ್ಮದಿಯಾಗುತ್ತಿತ್ತು. ಆದರೆ ಆ ರೀತಿ ಜಮೀನನ್ನು ರಿಸರ್ವ್ ಮಾಡಿಲ್ಲ. ತೀವ್ರಗತಿಯಿಂದ ದೇಶಕ್ಕೆ ವಿದ್ಯುತ್ ಬೇಕು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ಆ ಯೋಜನೆಯಲ್ಲಿ ಜಮೀನು ಕಳೆದುಕೊಂಡಂತಹ ರೈತರಿಗೆ ಪುನರ್ ವಸತಿ ಕಲ್ಪಿಸಲು ಯಾವ ವ್ಯವಸ್ಥೆ ಯನ್ನೂ ಮಾಡಿಲ್ಲ. ಯಾವ ಭೂಮಿಯನ್ನು ಅಕ್ವೈರ್ ಮಾಡಿಕೊಂಡಿಲ್ಲ. ಆ ಜನರ ಪರಿಹಾರ ದೃಷ್ಟಿಯಿಂದ ಯಾವ ಕಾರ್ಯಕ್ರಮವೂ ಪ್ರಾರಂಭವಾಗಿಲ್ಲ. ಯೋಜನೆ ಕೆಲಸ ಪ್ರಾರಂಭವಾಗಿದೆ. ಆದರೆ ಆ ಜನಗಳಿಗೆ ಯಾವ ರೀತಿ ಪುನರ್‌ವಸತಿ ಕಲ್ಪಿಸಿಕೊಡುತ್ತೀರಾ?

ಶ್ರೀ ಕೆ. ಎಚ್. ರಂಗನಾಥ್,—ಆ ಕೆಲಸದ ಅವಶ್ಯಕತೆ ಮತ್ತು ಮಾನ್ಯ ಸದಸ್ಯರ ತೀವ್ರತೆ ಏನಿದೆ ಎಂಬುದನ್ನು ನಾನು ಗಮನಿಸಿದ್ದೇನೆ. ಮಾನ್ಯ ಸದಸ್ಯರ ಕಳಕಳಿ ಏನಿದೆಯೆಂದರೆ ಆ ಯೋಜನೆಯಲ್ಲಿ ಜಮೀನು ಕಳೆದುಕೊಂಡ ಜನ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಜಹಳ ತೊಂದರೆಗೀಡಾಗಿದ್ದಾರೆ. ಸರಿಮಾರು ೧೯೩ ದಾಖಲು ಗ್ರಾಮಗಳು ತೊಂದರೆಗಿಡಾಗುತ್ತವೆ. ೧,೨೭೨ ಮನೆಗಳು ಮುಳುಗಡೆ ಗೀಡಾಗುತ್ತವೆ. ೩೯ ದೇವಸ್ಥಾನಗಳು ಮುಳುಗಡೆಯಾಗುತ್ತವೆ. ಸ್ಕೂಲ್ ಬಿಲ್ಡಿಂಗ್‌ಗಳು ೧೯ ಮುಳುಗಡೆಯಾಗುತ್ತವೆ. ಸರ್ಕಾರಿ ಬಿಲ್ಡಿಂಗ್‌ಗಳು ೧೩ ಮುಳುಗಡೆಯಾಗುತ್ತವೆ. ೮,೪೩೬ ಜನ ತೊಂದರೆಗಿಡಾಗಿದ್ದಾರೆ. ೪ ರೈಸ್ ಮಿಲ್‌ಗಳು ಮುಳುಗಡೆ ಯಾಗುತ್ತವೆ. ಸುಮಾರು ೯,೫೪೦ ಎಕರೆ ಹಿಡುವಳಿದಾರರ ಜಮೀನು ಮುಳುಗಡೆಯಾಗುತ್ತದೆ. ೩೪,೦೦೦ ಎಕರೆ ಸರ್ಕಾರಿ ಜಮೀನು ಮುಳುಗಡೆಯಾಗುತ್ತದೆ. ಅದನ್ನೆಲ್ಲಾ ಸರ್ಕಾರ ಗಮನಿಸಿದೆ. ಆದನ್ನು ಗಮನಿಸಿ ಒಂದು ಕಮಿಟಿ ಯನ್ನು ರಚನೆ ಮಾಡಿ ತೀವ್ರವಾಗಿ ಇದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಏರ್ಪಾಡು ಮಾಡಲಾಗಿದೆ. ನಾನು ಈಗಾಗಲೇ ಹೇಳಿದಹಾಗೆ ೧೯೮೧ನೇ ಇಸವಿ ಕೊನೆಯ ಹಂಟ್ಟಕ್ಕೆ ಬರುವಾಗ ಈ ಜನ ತೊಂದರೆಗೀಡಾಗುತ್ತಾರೆ. ಆಷ್ಟರೊಳಗೆ ವ್ಯವಸ್ಥೆ ಮಾಡಲಾಗುತ್ತದೆ. ಮನೆಗಳನ್ನು ಕಟ್ಟುವುದಕ್ಕೆ ಜಾಗ, ಹೊಸ ಊರನ್ನು ನಿರ್ಮಾಣ ಮಾಡುವುಕ್ಕೆ ಬೇಕಾದ ಜಮೀನು, ವ್ಯವಸಾಯಕ್ಕೆ ಭೂಮಿಯನ್ನು ಕೊಡತಕ್ಕದ್ದು ಇವೆಲ್ಲವನ್ನೂ ಕಮಿಟಿಯವರು ಮಾಡುತ್ತಾರೆ. ಮಾನ್ಯ ಸದಸ್ಯರ ಕಳಕಳಿ ಏನಿದೆ ಅದರ ಬಗ್ಗೆ ಆ ಜನಗಳಿಗೆ ಯಾವ ತೊಂದರೆಯೂ ಬಾರದಹಾಗೆ ಸರ್ಕಾರ ನೋಡಿಕೊಳ್ಳುತ್ತದೆ ಎಂದು ಹೇಳು ವುದಕ್ಕೆ ನಾನು ಇಷ್ಟಪಡುತ್ತೇನೆ.

ಶ್ರೀ ಜಿ. ರಾಜೂಗೌಡ.—ಈಗ ನಾನು ರೂಲ್ ನಂ. ೩೧೨ರ ಕೆಳಗೆ ಏನು ವಿಷಯವನ್ನು ಪ್ರಸ್ತಾಪ ಮಾಡಬೇಕಾಗಿದೆ ಅದು ಕಂದಾಯ ಇಲಾಖೆಗೆ ಸಂಬಂಧಪಟ್ಟದ್ದು. ಆದರೆ ಈಗ ಇಲ್ಲಿ ಮಾನ್ಯ ರೆವಿನ್ಯೂ ಮಂತ್ರಿಗಳು ಇಲ್ಲದೇ ಇರುವುದರಿಂದ ಅವರನ್ನು ದಯಮಾಡಿ ಈ ಸಭೆಗೆ ಕರೆಸಬೇಕೆಂದು ನಾನು ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್.—ಮಾನ್ಯ ರೆವಿನ್ಯೂ ಮಂತ್ರಿಗಳು ಈಗ ಮೇಲ್ಮನೆಯಲ್ಲಿ ಇದ್ದಾರೆ. ಅವರು ನನ್ನ ಬಳಿಗೆ ಈ ಸಂಬಂಧದಲ್ಲಿ ಒಂದು ಸ್ಟೇಟ್‌ಮೆಂಟ್ ಕಳುಹಿಸಿಕೊಟ್ಟಿದ್ದಾರೆ. ಅದನ್ನು ನಾನು ಓದುತ್ತೇನೆ.

MATTERS UNDER RULE 312

re : demand of Phody fees and arrears of Land Revenue from small holders and land less people in Mysore District.

SRI G. RAJU GOWDA (Hannur).— Sir, I wish to raise a matter under rule 312 regarding hardship caused to small holders and land less persons in Mysore District due to the demand of phody fees and arrears of land revenue, etc., by Revenue Officers.

SRI K. H. RANGANATH.—As the Revenue Minister has got his first question in the Legislative Council today, he has asked me to make a statement on his behalf :

As per rule 13 of Karnataka Land Grant Rules, 1969 as amended by Notification No. RD 32 LGP 77, dated 26th December 1977, a fee of Rs. 25 is being recovered from the grantees towards charges incurred for Survey and demarcation. But, in the case of persons belonging to Scheduled Castes and Scheduled Tribes and also persons belonging to weaker sections, whose annual income from all sources does not exceed Rs. 2,400 no such charges are levied -vide Flag 'A'.

In Mysore District, a mistake has crept in the matter of levying Rs. 20 as phodi fee which is not contemplated in the Land Revenue Act, 1964 or Rules, 1966. But, no collection has been made, though the demand has been booked at Rs 45. This matter of wrong booking is being enquired into and will be set right shortly. However, Government have not received any complaint of harassment in matters of collection of Land Revenue or other demands. If such instances are brought to the notice of the Government, action will be taken to set right the matter.

As per Circular No. RD 130 LGP 77, dated 19th November 1977, a nominal T.T. fine at Rs. 1 per acre per year has been levied for collection under the Karnataka Land Grant Rules, 1969 in respect of lands granted to the unauthorised occupants who are poor and landless persons. No harassment is being made even with regard to the collection of T.T. fine from the unauthorised occupants.-vide Flag 'B'.

With regard to the payment of arrears of land revenue, Government have issued orders in No. RD 215 SST 77. dated 5th October 1977 to grant exemption from payment of land revenue on holdings of rain-fed dry land not exceeding 2 hectares and equivalent of rain-fed wet land and for recovery of Rs. 1 per holding towards the maintenance of Records of Rights which is effective from the crop year beginning from 1st July 1977. This clearly indicates that the Government has taken a lenient attitude towards the small land-holders and persons who were in distress.

ಶ್ರೀ ಜಿ. ರಾಜೂಗೌಡ.—೧-೯-೧೯೭೨ ರಲ್ಲಿ ಯಾರು ಸರ್ಕಾರಿ ಭೂಮಿಯನ್ನು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದರೋ ಅವರಿಗೇ ಭೂಮಿಯನ್ನು ಭೂಮಿ ಮಂಜೂರಾತಿಯವರು ಮಂಜೂರು ಮಾಡಿದ್ದಾರೆ. ಬಹುಶಃ ಆ ಭೂಮಿಗಳನ್ನು ಅವರು ಸುಮಾರು ೧೫-೨೦ ವರ್ಷಗಳಿಂದ ವ್ಯವಸಾಯ ಮಾಡಿಕೊಂಡು ಬಂದಿದ್ದಾರೆ. ಇವತ್ತಿನದಿವಸ ಅವರ ಹೆಸರಿಗೆ ಖಾತೆ ಮಾಡಿದಮೇಲೆ ಹಿಂದಿನ ಬಾಕಿ ಏನಿದೆಯೋ ಅದನ್ನು ಅಂದರೆ ಆ ಭೂಮಿಯ ಕಂದಾಯವನ್ನು ಕೂಡಿ ಎಂದು ಕೇಳುತ್ತಿದ್ದಾರೆಯೇ ಹೊರತು ನಾಮಿನಲ್ಲಾಗಿ ಒಂದು ರೂಪಾಯಿಯನ್ನು ತೆಗೆದುಕೊಳ್ಳತಕ್ಕ ಪದ್ಧತಿಯನ್ನು ನಮ್ಮ ತಾಲ್ಲೂ

ಕಿನಲ್ಲಿ ಮಾಡಿಲ್ಲ. ನಮ್ಮ ತಹಶೀಲ್ದಾರರು ಸಣ್ಣ ರೈತರಿಗೆ ಇಲ್ಲದ ಸಲ್ಲದ ತೊಂದರೆಗಳನ್ನು, ಚಿತ್ರಹಿಂಸೆಯನ್ನು ಕೊಡುತ್ತಿರುವುದು ನನ್ನ ಕಣ್ಣಿದುರಿಗೆ ನಡೆದಿದೆ. ಇಂತಹ ಹಿಡುವಳಿದಾರರು ಇವತ್ತಿನದಿವಸ ಅನೇಕ ತೊಂದರೆಗಳಿಗೆ ಒಳಗಾಗಿದ್ದಾರೆ. ಈಗ ಮಾನ್ಯ ಮಂತ್ರಿಗಳು ಸರ್ಕ್ಯುಲರ್ ನಂಬರನ್ನು ಹೇಳಿದರು. ಅದನ್ನು ಅದಷ್ಟು ಜಾಗ್ರತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕಳಿಸಬೇಕು ಅಂತ್ತ ನನ್ನ ಕೈಗೆ ಅದರ ಒಂದು ಕಾಪಿಯನ್ನು ಕೊಟ್ಟರೆ ನಮ್ಮ ಸಣ್ಣ ರೈತರಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸುವುದಕ್ಕೆ ಸಾಧ್ಯವಾಗುತ್ತದೆ. ಮತ್ತೊಂದು ವಿಚಾರವೆಂದರೆ, ಹಿಡುವಳಿ ಭೂಮಿಯನ್ನು ಮಂಜೂರಾತಿ ಮಾಡಿದಾಗ ಪೋಡಿ ಪೀಸ್ ೪೦ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾ ಇಲ್ಲ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದರೆ ಅಲ್ಲಿ ಅವರು ಡಿಮ್ಯಾಂಡ್ ಮಾಡಿ ತೆಗೆದುಕೊಳ್ಳುತ್ತಾ ಇದ್ದಾರೆ. ತಾವು ಇಷ್ಟನೇ ನಂಬರ್ ಸರ್ಕ್ಯುಲರ್ ಪ್ರಕಾರ ಅದನ್ನು ಕೈಬಿಟ್ಟಿದ್ದೀವೆಂದು ಹೇಳಿದ್ದೀರಿ. ಆದುದರಿಂದ ಇದನ್ನು ಅದಷ್ಟು ಬೇಗ ಕಂದಾಯ ಇಲಾಖೆಯ ಅಧಿಕಾರಿಗಳಿಗೆ ತಿಳಿಸಿ ಈ ಹಿಡುವಳಿಗಾರರಿಗೆ ಆಗತಕ್ಕ ಕಿರುಕುಳವನ್ನು ತಪ್ಪಿಸಬೇಕು ಎಂದು ಕೇಳಿಕೊಳ್ಳುತ್ತಾ ಇದ್ದೇನೆ.

ಶ್ರೀ ಕೆ.ಎಚ್. ರಂಗನಾಥ್.—ಯಾವುದೇ ಕಾನೂನು ಮಾಡಿದರೂ ಮುಂದಕ್ಕೆ ಅನ್ವಯವಾಗುತ್ತದೆಯೇ ಹೊರತು ಹಿಂದಿನಿಂದ ಅನ್ವಯವಾಗುತ್ತದೆ ಎಂದು ಹೇಳಿದರೆ ಮಾತ್ರ ಹಿಂದಿನಿಂದ ಅನ್ವಯವಾಗುತ್ತದೆ. ಮಾನ್ಯ ಸದಸ್ಯರು ಅವರು ೧೦-೧೫ ವರ್ಷಗಳಿಂದ ಭೂಮಿಯನ್ನು ವ್ಯವಸಾಯ ಮಾಡುತ್ತಿದ್ದಾರೆಂದು ಹೇಳಿದ್ದಾರೆ. ಆಗ ಈ ಕಾನೂನು ಇಲ್ಲದೇ ಇದ್ದುದರಿಂದ ಅವರು ಕೊಡಲೇಬೇಕಾಗುತ್ತದೆ. ಮಾನ್ಯ ಸದಸ್ಯರು ಏನು ವಿಷಯನ್ನು ಪ್ರಸ್ತಾಪಮಾಡಿದ್ದಾರೆ ಅದನ್ನು ಮಾನ್ಯ ರೆವಿನ್ಯು ಮಂತ್ರಿಗಳ ಗಮನಕ್ಕೆ ತಂದರೆ ಅವರು ಸೂಕ್ತವಾಗಿ ಪರಿಶೀಲನೆಮಾಡುತ್ತಾರೆ.

ಶ್ರೀ ಜಿ. ರಾಜೂಗೌಡ.—ಮಾನ್ಯ ಮಂತ್ರಿಗಳು ಯಾರಾದರೂ ಭೂಮಿಯನ್ನು ಬಗರ್‌ಹುಕುಂ ಮಾಡುತ್ತಿದ್ದರೆ ಒಂದು ವರ್ಷಕ್ಕೆ ಒಂದು ರೂಪಾಯಿ ತೆಗೆದುಕೊಳ್ಳುತ್ತಾ ಇದ್ದೇವೆ ಎಂದು ಹೇಳಿದರು. ಅವರು ೧೫–೨೦ ವರ್ಷಗಳಿಂದ ವ್ಯವಸಾಯ ಮಾಡುತ್ತಿರುವುದರಿಂದ ಹಿಂದಿನ ಪ್ರತಿವರ್ಷದ ಕಂದಾಯವನ್ನೂ ವಸೂಲುಮಾಡುತ್ತಿದ್ದಾರೆ ಇದರ ಬಗ್ಗೆ ದಯಮಾಡಿ ತಿಳಿಸಬೇಕು.

ಶ್ರೀ ಕೆ.ಎಚ್. ರಂಗನಾಥ್.—ನಾನು ಸ್ಪಷ್ಟವಾಗಿ ತಿಳಿಸಲಿಲ್ಲ ಎಂದು ಕಾಣುತ್ತದೆ. ಕಾನೂನು ಮಾಡಿದಮೇಲೆ ಕಾನೂನು ಬಂದ ದಿವಸದಿಂದ ಮುಂದಕ್ಕೆ ಅದು ಅನ್ವಯವಾಗುತ್ತದೆ. ಅದರ ಹಿಂದೆ ಬಗರ್‌ಹುಕುಂ ಸಾಗು ಮಾಡುತ್ತಿದ್ದರೆ ಅದರ ಹಿಂದೆ ಏನು ಕಾನೂನು ಇರುತ್ತದೋ ಅದು ಅನ್ವಯವಾಗುತ್ತದೆ. ಕಾನೂನು ಮಾಡಿದ ಮೇಲೆ ಅದು ಹಿಂದಿನಿಂದ ಅನ್ವಯವಾಗಬೇಕು ಎಂದು ತಹಶೀಲ್ದಾರರಿಗೆ ಹೇಳಲಿಕ್ಕೂ ಸಾಧ್ಯವಾಗುವುದಿಲ್ಲ. ಅವರು ಮಾಡದೇ ಇರಲಿಕ್ಕೂ ಸಾಧ್ಯವಾಗುವುದಿಲ್ಲ. ಮಾನ್ಯ ಸದಸ್ಯರು ಏನು ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದಾರೆ ಅದನ್ನು ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ತಂದರೆ ಅವರು ಪರಿಶೀಲನೆಮಾಡುತ್ತಾರೆ.

(*ii*) *re: revision of fares and freight by the K.S.R.T.C. and the B.T.S.*

Sri M.V. Rajashekharan (Uttarahalli).—I raise the matter under rule 312 regarding revising the rates of fares and freight for all passenger buses run by K.S.R.T.C. including Bangalore Transport Service.

ಶ್ರೀ ಆರ್. ಗುಂಡೂರಾವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಏನು ವಿಷಯವಸ್ತುವನ್ನು ಕೇಳಿದ್ದಾರೆ.....

Sri T.R. Shamanna.—Regarding the matter under rule 312 a statement is being made by the Members and afterwards some clarification and reply is to be given by the Minister.....

Mr. Speaker.—The same matter has been raised by several Hon'ble Members.